ರಾಜ್ಯದಲ್ಲಿ ಹೊಸ ಸಕ್ಕರೆ ಕಾರ್ಖಾನೆಗಳ ಸ್ಥಾಪನೆ

468 (668) ಶ್ರೀ ಡಿ.ಆರ್. ಪಾಟೀಲ್ (ಗದಗ):– ಮಾನ್ಯ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಬ್ಬು ಬೆಳೆಯುವ ಕ್ಷೇತ್ರ ಎಷ್ಟು? ಬೆಳೆಯಲಾಗುವ ಕಬ್ಬಿನ ಪ್ರಮಾಣ ಎಷ್ಟು?

ಆ) ರಾಜ್ಯದಲ್ಲಿ ಈಗಿರುವ ಸಹಕಾರಿ ಸಕ್ಕರೆ ಕಾರ್ಖಾನೆಗಳೆಷ್ಟು; ಹಾಗೂ ಅವುಗಳ ಒಟ್ಟು ಕಬ್ಬು ನುರಿಸುವ ಸಾಮರ್ಥ್ಯ ವೆಷ್ಟು;

ಇ) ರಾಜ್ಯದಲ್ಲಿ ಹೊಸದಾಗಿ ಸಹಕಾರಿ ಕ್ಷೇತ್ರದಲ್ಲಿ ಎಷ್ಟು ಸಕ್ಕರೆ ಕಾರ್ಖಾನೆಗಳು ಬರಲಿವೆ ಹಾಗೂ ಅವು ಅನುಷ್ಠಾನದ ಯಾವ ಹಂತದಲ್ಲಿವೆ;

ಈ) ಈ ಸಕ್ಕರೆ ಕಾರ್ಖಾನೆಗಳು ಕಾರ್ಯಾರಂಭ ಮಾಡಲು ಸರಕಾರ ನೀಡಬೇಕಾಗಿರುವ ಹಣಕಾಸಿನ ನೆರವಿನ ಮೊತ್ತವೆಷ್ಟು; ಈವರೆಗೆ ಎಷ್ಟು ಹಣಕಾಸು ಒದಗಿಸಲಾಗಿದೆ ಎಷ್ಟು ಹಣಕಾಸು ಒದಗಿಸಬೇಕಾಗಿದೆ;

ಉ) ರಾಜ್ಯದಲ್ಲಿ ಹೊಸದಾಗಿ ಸಹಕಾರಿ ಕ್ಷೇತ್ರದಲ್ಲಿ ಎಷ್ಟು ಸಕ್ಕರೆ ಕಾರ್ಖಾನೆ ಸ್ಥಾಪನೆಗೆ ಲೈಸೆನ್ಸ್‌ಗಳನ್ನು ನೀಡಲಾಗಿದೆ;

ಊ) ಲೈಸೆನ್ಸ್ ಪಡೆದಿರುವ ಈ ಸಹಕಾರಿ ಕ್ಷೇತ್ರದಲ್ಲಿ ಸಕ್ಕರೆ ಕಾರ್ಖಾನೆಗಳ ಒಟ್ಟು ಯೋಜನಾ ವೆಚ್ಚ ಎಷ್ಟು; ಅದರಲ್ಲಿ ಸರಕಾರ ತೊಡಗಿಸಬೇಕಾದ ಶೇರು ಬಂಡವಾಳ ಎಷ್ಟು;

ಋ) ಪ್ರಸಕ್ತ ಹಣಕಾಸು ವರ್ಷದಲ್ಲಿ ಸಹಕಾರ ಸಕ್ಕರೆ ಕಾರ್ಖಾನೆಗಳಿಗೆ ಎಷ್ಟು ಶೇರು ಬಂಡವಾಳವನ್ನು ಸರ್ಕಾರ ಒದಗಿಸಿದೆ.

ೠ) ಲೈಸೆನ್ಸ್ ಪಡೆದಿರುವ ಎಲ್ಲಾ ಸಹಕಾರಿ ಸಕ್ಕರೆ ಕಾರ್ಖಾನೆಗಳಿಗೆ ಸರ್ಕಾರ ತನ್ನ ಶೇರು ಬಂಡವಾಳವನ್ನು ಎಷ್ಟು ಕಾಲದಲ್ಲಿ ಒದಗಿಸಲಿದೆ ಹಾಗೂ ಅದಕ್ಕೆ ಹಾಕಿಕೊಂಡಿರುವ ಯೋಜನೆಯ ವಿವರ ನೀಡಿರಿ.

ಶ್ರೀ ಉಮೇಶ್ ಏ ಕತ್ತಿ (ಸಕ್ಕರೆ ಸಚಿವರು)

ಅ) ರಾಜ್ಯದಲ್ಲಿ 2.39 ಲಕ್ಷ ಹೆಕ್ಟೇರ್‌ನಲ್ಲಿ 196 ಲಕ್ಷ ಟನ್ ಕಬ್ಬನ್ನು ಬೆಳೆಯುವ ಅಂದಾಜು ಮಾಡಲಾಗಿದೆ.

ಆ) ರಾಜ್ಯದಲ್ಲಿ ಈಗ 16 ಸಹಕಾರಿ ಸಕ್ಕರೆ ಕಾರ್ಖಾನೆಗಳಿದ್ದು, ಅವುಗಳ ಒಟ್ಟು ಕಬ್ಬು ನುರಿಸುವ ದಿನವಹಿ ಸಾಮರ್ಥ್ಯ 33250 ಟನ್‌ಗಳಾಗಿರುತ್ತದೆ.

ಇ) ರಾಜ್ಯದಲ್ಲಿ ಹೊಸದಾಗಿ ಸಹಕಾರಿ ಕ್ಷೇತ್ರದಲ್ಲಿ 10 ಸಕ್ಕರೆ ಕಾರ್ಖಾನೆಗಳು ಬರವಿವೆ. ಅವುಗಳ ಪ್ರಸಕ್ತ ಹಂತದ ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ಈ) ಈ ಸಕ್ಕರೆ ಕಾರ್ಖಾನೆಗಳಿಗೆ ಸರ್ಕಾರ ತನ್ನ ಪಾಲು ಬಂಡವಾಳವನ್ನಾಗಿ ಒಟ್ಟು ರೂ.14,130-00 ಲಕ್ಷ ನೀಡಬೇಕಾಗಿದ್ದು, ಈವರೆಗೆ ರೂ. 2294.00 ಲಕ್ಷ ಬಿಡುಗಡೆ ಮಾಡಿದೆ. ಇನ್ನೂ ರೂ. 11,836.00 ಲಕ್ಷವನ್ನು ಒದಗಿಸಬೇಕಾಗಿದೆ.

ಉ) ರಾಜ್ಯದಲ್ಲಿ ಹೊಸದಾಗಿ ಸಹಕಾರಿ ಕ್ಷೇತ್ರದಲ್ಲಿ 10 ಸಕ್ಕರೆ ಕಾರ್ಖಾನೆಗಳ ಸ್ಥಾಪನೆಗೆ ಲೈಸೆನ್ಸ್‌ಗಳನ್ನು ನೀಡಲಾಗಿದೆ.

ಊ) ದಿನವಹಿ 2500 ಟನ್ ಕಬ್ಬು ಅರೆಯುವ ಸಾಮರ್ಥ್ಯದ ಒಂದು ಹೊಸ ಸಕ್ಕರೆ ಕಾರ್ಖಾನೆಯ ಸಾಧನೆಗೆ ಆಗುವ ಯೋಜನಾ ವೆಚ್ಚ ಅಂದಾಜು ರೂ. 4800.00 ಲಕ್ಷ. ಸಹಕಾರಿ ಕ್ಷೇತ್ರದಲ್ಲಿ ಸ್ಥಾಪಿಸುವ ಪ್ರತಿಯೊಂದು ಕಾರ್ಖಾನೆಯಲ್ಲಿ ಸರ್ಕಾರವು ಶೇ. 30 ರಷ್ಟು ಅಂದರೆ ರೂ.1440.00 ಲಕ್ಷ ಪಾಲು ಬಂಡವಾಳವನ್ನು ತೊಡಗಿಸಬೇಕಾಗಿದೆ.

ಋ) ಪ್ರಸಕ್ತ ಹಣಕಾಸು ವರ್ಷದಲ್ಲಿ ಸಹಕಾರ ಸಕ್ಕರೆ ಕಾರ್ಖಾನೆಗಳಿಗೆ ಷೇರುಧನ ಒದಗಿಸಲು ಅಯವ್ಯಯದಲ್ಲಿ ರೂ. 473.00 ಲಕ್ಷ ಒದಗಿಸಿದೆ.

ಋೂ) ಲೈಸೆನ್ಸ್ ಪಡೆದಿರುವ ಎಲ್ಲಾ ಸಹಕಾರಿ ಸಕ್ಕರೆ ಕಾರ್ಖಾನೆಗಳಿಗೆ ಸರ್ಕಾರ ತನ್ನ ಶೇರು ಬಂಡವಾಳವನ್ನು ಒದಗಿಸುವ ಕಾಲಮಿತಿಯು ಸದರಿ ಕಾರ್ಖಾನೆಗಳಿಗೆ ಅವಧಿ ಸಾಲ ಏರ್ಪಡುವುದನ್ನು ಅವಲಂಭಿಸಿದೆ. ಪ್ರಸ್ತುತ ಪರಿಸ್ಥಿತಿಯನ್ನು ಆಧರಿಸಿ, ರೂಪಿಸಿರುವ ಯೋಜನೆಯ ಪ್ರಕಾರ ಮುಂದಿನ 4 ವರ್ಷಗಳ ಅವಧಿಯೊಳಗೆ ಷೇರು ಹಣವನ್ನು ಒದಗಿಸಲು ಯೋಚಿಸಿದೆ.

ಹೊಸ ಸಹಕಾರ ಸಕ್ಕರೆ ಕಾರ್ಖಾನೆಗಳ ಪ್ರಗತಿ ತಃಖ್ತೆ

ಕ್ರ. ಸಂ.	ಹೊಸ ಸಹಕಾರ ಸಕ್ಕರೆ ಕಾರ್ಖಾನೆಯ ಹೆಸರು.	ಅಂದಾಜು ಯೋಜನಾ ವೆಚ್ಚ (ಲಕ್ಷ ರೂ. ಗಳಲ್ಲಿ)	ಸದಸ್ಯರಿಂದ ಸಂಗ್ರಹಿಸಿದ ಪಾಲು ಬಂಡವಾಳ (ಲಕ್ಷ ರೂ. ಗಳಲ್ಲಿ)	ಸರ್ಕಾರ ನೀಡಿರುವ ಪಾಲು ಬಂಡವಾಳ (ಲಕ್ಷ ರೂ. ಗಳಲ್ಲಿ)	ನಿವೇಶನ ಖರೀದಿ	ಪ್ರಸ್ತುತ ಹಂತ
1.	ಭಾಗ್ಯಲಕ್ಷ್ಮೀ ಸ.ಸ.ಕಾ.	4000.00	550.00	1170.00	ನಿರ್ಮಾಣ ಕಾರ್ಯ ಮುಕ್ತಾಯದ ಹಂತದಲ್ಲಿದೆ.	
2.	ನಾರಂಜಾ ಸ.ಸ.ಕಾ.	4800.00	285.00	710.00	215.19 ಎಕ್ರೆ ಜಮೀನನ್ನು ಖರೀದಿಸಿದೆ.	ಕಾಮಗಾರಿ ಕೆಲಸ ಪ್ರಾರಂಭಿಸಿರುತ್ತಾರೆ. ಅವಧಿ ಸಾಲ ಮಂಜೂರಾಗಿರುವುದಿಲ್ಲ.
3.	ಕೃಷ್ಣಾ ಸ.ಸ.ಕಾ.	4800.00	285.00	414.00	93.23 ಎಕ್ರೆ ಜಮೀನನ್ನು ಖರೀದಿಸಿದೆ ಕ್ರಮ ಎಟ್ಟಿದೆ.	ಕಾಮಗಾರಿ ಕೆಲಸ ಪ್ರಾರಂಭಿಸಿರುತ್ತಾರೆ. ಅವಧಿ ಸಾಲ ಮಂಜೂರು ರಾಗಿರುವುದಿಲ್ಲ.

1	2	3	4	5	6	7
4.	ಮಾರ್ಕಂಡೇಯ ಸ.ಸ.ಕಾ.	4800.00	301.00	-	150 ಎಕ್ರೆಯನ್ನು ಅರಣ್ಯ ಇಲಾಖೆಯಿಂದ ಖರೀದಿಸಲು ಕ್ರಮವಿಟ್ಟಿದೆ.	ನಿರ್ಮಾಣ ಕಾರ್ಯ ಪ್ರಾರಂಭವಾಗಿರುವುದಿಲ್ಲ. ಅವಧಿ ಮುಂಜೂರಾಗಿರುವುದಿಲ್ಲ.
5.	ಮಹಾತ್ಮ ಗಾಂಧಿ ಸ.ಸ.ಕಾ.	4800.00	110.00	-	ಜಮೀನು ಪಡೆಯಲು ಕ್ರಮವಿಡಲಾಗಿದೆ.	- " -
6.	ಭೀಮಾಶಂಕರ್ ಸ.ಸ.ಕಾ.	4800.00	349.00	-	202 ಎಕ್ರೆ ಜಮೀನು ಖರೀದಿಸಿದೆ.	- " -
7.	ರೈತರ ಸ.ಸ.ಕಾ.	4800.00	125.00	-	200 ಎಕ್ರೆ ಜಮೀನು ಖರೀದಿಸಲು ಕ್ರಮ ವಿಡಲಾಗಿದೆ.	- " -
8.	ಸೋಮೇಶ್ವರ ಸ.ಸ.ಕಾ.	4800.00	304.00	-	ಜಮೀನು ಪಡೆಯಲು ಕ್ರಮವಿಡಲಾಗಿದೆ.	- " -
9.	ನರಗುಂದ ಸ.ಸ.ಕಾ.	4800.00	3.00	-	- " -	- " -
10.	ಧನಲಕ್ಷ್ಮಿ ಸ.ಸ.ಕಾ.	4800.00	-	-	- " -	- " -

ಟಿಪ್ಪಣಿ:-

ಸದಸ್ಯರ ಷೇರು - ಯೋಜನಾ ವೆಚ್ಚದಲ್ಲಿ ಶೇ. 10

ಸರ್ಕಾರಗಳ ಪಾಲು ಬಂಡವಾಳ ಶೇ. 30

ಅವಧಿ ಸಾಲ ಶೇ. 60

ಸಕ್ಕರೆ ಕಾರ್ಖಾನೆಗಳು 1994-95ರ ಸಾಲಿನಲ್ಲಿ ಗಳಿಸಿದ ಲಾಭ : ಅನುಭವಿಸಿದ ನಷ್ಟದ ವಿವರಗಳು

(ಲಕ್ಷ ರೂ. ಗಳಲ್ಲಿ)

ಕ್ರ.ಸಂ.	ಕಾರ್ಖಾನೆಯ ಹೆಸರು	1994-95ರ ಸಾಲಿನಲ್ಲಿ	
		ಗಳಿಸಿದ ಲಾಭ.	ಅನುಭವಿಸಿದ ನಷ್ಟ.
1.	ಬೀದರ್ ಸ.ಸ.ಕಾ. (ನಿ),	-	1331.22
2.	ಭದ್ರಾ ಸ.ಸ.ಕಾ. (ನಿ),	27.65	-
3.	ದಕ್ಷಿಣ ಕನ್ನಡ ಸ.ಸ.ಕಾ. (ನಿ),	-	107.22
4.	ದೂಧಗಂಗಾಕೃಷ್ಣಾ ಸ.ಸ.ಕಾ. (ನಿ),	-	554.00
5.	ಘಟಪ್ರಭಾ ಸ.ಸ.ಕಾ. (ನಿ),	-	132.78
6.	ಹೇಮಾವತಿ ಸ.ಸ.ಕಾ. (ನಿ),	31.96	-
7.	ಹಾಲಸಿದ್ದನಾಥ ಸ.ಸ.ಕಾ.	-	142.04
8.	ಕರ್ನಾಟಕ ಸ.ಸ.ಕಾ.	-	52.64
9.	ಕಂಪ್ಲಿ ಸ.ಸ.ಕಾ.	-	86.78
10.	ಹಿರಣ್ಯಕೇಶಿ ಸ.ಸ.ಕಾ.	11.44	-
11.	ಮಲಪ್ರಭಾ ಸ.ಸ.ಕಾ.	1.51	-
12.	ನಂದಿ ಸ.ಸ.ಕಾ.	-	31.06
13.	ಪಾಂಡವಪುರ ಸ.ಸ.ಕಾ.	-	108.92
14.	ರಾಯಬಾಗ್ ಸ.ಸ.ಕಾ.	1.65	-
15.	ಶ್ರೀ ಶ್ರೀರಾಮ ಸ.ಸ.ಕಾ.	27.90	-
16.	ಸ.ಸ.ಕಾ. ಆಳಂದ	-	231.14
17.	ವಾಣಿವಿಲಾಸ ಸ.ಸ.ಕಾ.	4.52	-
18.	ಮೈಸೂರು ಸಕ್ಕರೆ ಕಂಪೆನಿ	359.22	-
19.	ಎಂ.ಪಿ.ಎಂ.	-	182.15

20.	ಗಂಗಾವತಿ ಶುಗರ್ಸ್	-	222.07
21.	ದಾವಣಗೆರೆ ಶುಗರ್ಸ್	43.50	-
22.	ಬನ್ನಾರಿ ಅಮ್ಮನ್ ಶುಗರ್ಸ್	-	-
23.	ಶ್ರೀ ಚಾಮುಂಡೇಶ್ವರಿ	139.04	-
24.	ಐ.ಎಸ್.ಆರ್.	152.52	-
25.	ಶಿರಗುಪ್ಪ ಶುಗರ್ಸ್ (ಗೌರಿಬಿದನೂರು)	88.32	-
26.	ಶಿರಗುಪ್ಪ ಶುಗರ್ಸ್ (ದೇಶನೂರು)	-	3.03
27.	ತುಂಗಭದ್ರಾ ಶುಗರ್ ವರ್ಕ್ಸ್	ಮಾಹಿತಿ ಲಭ್ಯವಿರುವುದಿಲ್ಲ	
28.	ಮಹದೇಶ್ವರ ಶುಗರ್ ಮಿಲ್ಸ್	ಮಾಹಿತಿ ಲಭ್ಯವಿರುವುದಿಲ್ಲ	
29.	ಗೋದಾವರಿ ಶುಗರ್ ಮಿಲ್ಸ್	285.18	-
30.	ಉಗಾರ್ ಶುಗರ್ ವರ್ಕ್ಸ್	320.51	-

ಗದಗ ಬೆಟಗೇರಿಗೆ ಕುಡಿಯುವ ನೀರಿನ ಪೂರೈಕೆ

469 (666) ಶ್ರೀ ಡಿ.ಆರ್. ಪಾಟೀಲ್ (ಗದಗ):- ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವೆ?

ಅ) ಗದಗ ಬೆಟಗೇರಿ ಅವಳಿ ನಗರಗಳ ನಿತ್ಯ ಕುಡಿಯುವ ನೀರು ಪೂರೈಸಲು ಇರುವ ತೊಂದರೆಗಳೇನು?

ಆ) ಗದಗ ಬೆಟಗೇರಿ ನಗರಕ್ಕೆ ಕುಡಿಯುವ ನೀರು ಪೂರೈಸುವ ಎರಡನೇ ಹಂತದ ಯೋಜನೆ ಎಂದಿನಿಂದ ಪ್ರಾರಂಭಿಸಲಾಗುವುದು?

ಇ) ಗದಗ ಬೆಟಗೇರಿ ಅವರ ನಗರದ ಒಳಚರಂಡಿ ಯೋಜನೆ ಮಂಜೂರಾಗಿದ್ದರೂ ಕಾರ್ಯಾರಂಭವಾಗದಿರಲು ಕಾರಣಗಳೇನು?

ಈ) ಒಳಚರಂಡಿ ಯೋಜನೆ ಕಾರ್ಯಾರಂಭ ಮಾಡಲು ನಗರಸಭೆ ನೀಡಬೇಕಾದ ಮೊದಲು ಕಂತಿನ ಮೊತ್ತವೆಷ್ಟು?

ಉ) ಈ ಯೋಜನೆಯನ್ನು ಕಾಲಮಿತಿಗೊಳಪಟ್ಟು ಪೂರ್ಣಗೊಳಿಸಲಾಗುವುದೇ?

ಶ್ರೀ ಬಿ.ಎನ್. ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು)

ಅ) ಗದಗ ಬೆಟಗೇರಿ ಅವಳಿ ನಗರಕ್ಕೆ ನಿತ್ಯ ಕುಡಿಯುವ ನೀರು ಪೂರೈಕೆಯ ವ್ಯವಸ್ಥೆ ಮಾಡಲು ನಗರದಲ್ಲಿ ಹೆಚ್ಚು ಮೇಲಟ್ಟದ ಜಲಸಂಗ್ರಹಾಲಯಗಳನ್ನು ಕಟ್ಟುವ ಮತ್ತು ಅವುಗಳಿಗೆ ಕೊಳವೆ ಮಾರ್ಗವನ್ನು ಅಳವಡಿಸಲು ಯೋಜನೆ ತಯಾರಿಸಬೇಕಾಗಿದೆ.